ದಿನಾಂಕಃ 03.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಟಿ ಎಸ್ ಆರ್ ವಕೀಲರಿಂದಃ</u>**

ಅನಿಲ್ ಕುಮಾರ್ ರವರಿಗೆ ಎ ವಿ ರಾಜು ಬರೆದಿರುವ ವಿಲ್ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ . ಅನಿಲ್ ಕುಮಾರ್ ರವರು ದಾವಾ ಸ್ವತ್ತನ್ನು ಅರುಣ್ ಕುಮಾರ್ ರವರಿಗೆ ದಿ ಃಃ 21.01.2013 ರಂದು ದಾನ ಕೊಟ್ಟಿದ್ದರು ಎಂದರೆ ಸರಿ . ಅನಿಲ್ ಕುಮಾರ್ ರವರಿಗೆ ದಾವಾ ಸ್ವತ್ತು ದಿ ಃ 14.12.1992 ರಲ್ಲಿ ವಿಲ್ ನ ಮುಖಾಂತರ ಬಂದಿತ್ತು ಎಂದರೆ ಸರಿ . ಅನಿಲ್ ಕುಮಾರ್ ರವರ ತಂದೆ ಎ ವಿಜೇಯೇಂದ್ರ ಎಂದರೆ ಸರಿ . ಎ ವಿಜೇಯೇಂದ್ರ ರವರ ತಂದೆ ಪಿ ಮೂರ್ತಿ ಎಂದರೆ ಸರಿ . ಎ ವಿಜೇಯೇಂದ್ರ ರವರು 28.03.1994 ರಲ್ಲಿ ತೀರಿಕೊಂಡಿದ್ದರು ಎಂದರೆ ಸರಿ . ಅನಿಲ್ ಕುಮಾರ್ ರವರು ವಿಜಯ್ ಕುಮಾರ್ ರವರಿಗೆ ಸ್ವತ್ತುನ್ನು ಮಾರಾಟ ಮಾಡಿದ್ದರು. ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಹೌದು . 17.03.2015 ರಲ್ಲಿ ಅನಿಲ್

ಕುಮಾರ್ ವಿಜಯ್ ಕುಮಾರ್ ರವರಿಗೆ ಕ್ರಯ ಮಾಡಿದ್ದರು ಎಂದರೆ ಸರಿ . ವಿಜಯ್ ಕುಮಾರ್ ರವರು ವಿಜಯಕುಮಾರಿಯವರಿಗೆ ದಿ ಃ 15.03.2016 ರಲ್ಲಿ ಮಾರಾಟ ಮಾಡಿದ್ದರು ಎಂದರೆ ಸರಿ .

ಎ ವಿಜೇಯೇಂದ್ರ ರವರು 1994 ನೇ ಇಸವಿಯಲ್ಲಿ ತೀರಿಕೊಂಡ ಸಮಯದಲ್ಲಿ ಅವರ ತಂದೆ ಪಿ ಮೂರ್ತಿ ರವರು ಬದುಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಪಿ ಮೂರ್ತಿ ರವರು 31.03.1995 ರಲ್ಲಿ ದಾವಾ ಸ್ವತ್ತಿಗೆ ಕೆ ಯು ಗುರುಪಾದೇಗೌಡ ರವರಿಗೆ ಪವರ್ ಆಪ್ ಅರ್ಟಾನಿ ಬರೆದುಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಕೆ ಯು ಗುರುಪಾದೇಗೌಡರವರು ಮದನಿ ರಾಮಯ್ಯ ಚೌದರಿಯವರಿಗೆ (ವಾದಿಗೆ) ದಿ ಃ 02.11.1995 ರಲ್ಲಿ ಕ್ರಯಪತ್ರ ಮಾಡಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಪಿ ಮೂರ್ತಿ ರವರು ಕೆ ಯು ಗುರುಪಾದೇಗೌಡರ ಮೂಲಕ ವಾದಿಯವರಿಗೆ ಕ್ರಯಪತ್ರ ಮಾಡಿರುತ್ತಾರೆ ಅದರಲ್ಲಿ ಸ್ವತ್ತಿನ ಸ್ವಾ ಧೀನವನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನೀವು 2016 ರಲ್ಲಿ ಸ್ವತ್ತನ್ನು ಖರೀದಿ ಮಾಡುವ ಪೂರ್ವ ದಲ್ಲಿ ಸ್ವತ್ತಿಗೆ ಸಂಬಂದಿಸಿದ ದಾಖಲೆಗಳನ್ನು ಪರಿಶೀಲಿಸಿದ್ದೀರಾ ಎಂದರೆ ಜನರಲ್ ಆಗಿ ಚೆಕ್ ಮಾಡಿಸಿದ್ದೆವು . ನಂತರ ನಾವು ಬ್ಯಾಂಕಿಗೆ ದಾಖಲೆಗಳನ್ನು ಸಲ್ಲಿಸಿ

ಸಾಲ ಪಡೆದುಕೊಂಡಿದ್ದೆವು .  ನೀವು ಖರೀದಿ ಮಾಡುವ ಪೂರ್ವದಲ್ಲಿ ಸ್ವತ್ತಿನ ಎನ್ ಕಮ್ ರೆನ್ಸ್ ನ್ನು ಪರಿಶೀಲಿಸಿದ್ದೀರಾ ಎಂದರೆ ಹೌದು .

ಸಾಕ್ಷಿಗೆ ನಿಪಿ 4 ನ್ನು ತೋರಿಸಲಾಗಿ ಅದನ್ನು ಅವರು ಪರಿಶೀಲಿಸಿ ಸದರಿ ನಿಪಿ 4 ದಾವಾ ಸ್ವತ್ತಿಗೆ ಸಂಬಂಧಿಸಿದ್ದು ಎಂದು ಹೇಳುತ್ತಾರೆ . ನಿಪಿ 4 ಇಸಿಯ ಅವಧಿ 01.04.1984 ರಿಂದ 31.03.2014 ರವರೆಗೂ ಇದೆ ಎಂದರೆ ಸರಿ . ನೀವು ನಿಪಿ 4 ಎನ್ ಕಮ್ ರೆನ್ಸ್ ನ್ನು ಪರಿಶೀಲಿಸಿದ್ದರೆ ವಿಜಯ್ ಕುಮಾರ್ ರವರಿಂದ ಕ್ರಯಪತ್ರವನ್ನು ಬರೆಸಿಕೊಳ್ಳುತ್ತಿರಲಿಲ್ಲ ಎಂದರೆ ನಾನು ಪರಿಶೀಲಿಸೇ ಖರೀದಿ ಮಾಡಿದ್ದೆ ಎಂದು ಹೇಳುತ್ತಾರೆ . ನಿಪಿ 9 ದಾವಾ ಸ್ವತ್ತಿಗೆ ಸಂಬಂಧ ಪಡುತ್ತದೆ ಅದು ಪಿ ಮೂರ್ತಿರವರ ಹೆಸರಿನಲ್ಲಿದೆ . ನಿಪಿ 10 ವಾದಿಯವರ ಹೆಸರಿನಲ್ಲಿದೆ ಎಂದರೆ ಸರಿ . ನಿಪಿ 10 ರಲ್ಲಿ ದಾವಾ ಸ್ವತ್ತಿನಲ್ಲಿ ವಾದಿ ಅನುಭವದಲ್ಲಿದ್ದಾರೆ ಎಂದು ಬರೆದಿದ್ದಾರೆ ಎಂದರೆ ಸರಿ . ನಿಪಿ 10 ದಾಖಲೆ 2001 – 02 ನೇ ಇಸವಿಗೆ ಸಂಬಂಧಿಸಿದೆ . ದಾವಾ ಸ್ವತ್ತಿಗೆ ನಿಪಿ 11 ರಂತೆ 01.03.1994 ರಲ್ಲಿ ಪಿ ಮೂರ್ತಿ ರವರು ಕಂದಾಯ ಕಟ್ಟಿದ್ದಾರೆ ಎಂದರೆ ಸಾಕ್ಷಿ ನಿಪಿ 11 ನ್ನು ಪರಿಶೀಲಿಸಿ ಹೌದು ಎಂದು ಹೇಳಿರುತ್ತಾರೆ . ಸೈಟ್ ನಂಬರ್ 42 ಕ್ಕೆ ದಿ ಃ 19.03.2004 ರಲ್ಲಿ ವಾದಿ ಮದನಿ ರಾಮಯ್ಯ ಚೌದರಿರವರು ನಿಪಿ 12

, 13, 14 , 15 , 16 , 17 , 18, 19 , 20 , 21 ರಂತೆ ಪಂಚಾಯ್ತ , ಜಿಲ್ಲಾ ಪಂಚಾಯ್ತಿ ಮತ್ತು ಬಿಬಿಎಂಪಿಗೆ ಕಂದಾಯ ಕಟ್ಟಿರುವ ರಶೀದಿಗಳು ಎಂದರೆ ಸಾಕ್ಷಿ ಸದರಿ ರಶೀದಿಗಳನ್ನು ಪರಿಶೀಲಿಸಿ ಹೌದು ಎಂದು ಹೇಳಿರುತ್ತಾರೆ . ದಾವಾ ಸ್ವತ್ತಿನಲ್ಲಿ ಬೋರ್ ವೆಲ್ ಇದೆ ಎಂದರೆ ಸರಿ . 2009 ರಲ್ಲಿ ಬೋರ್ ವೆಲ್ ತೆಗೆಸಿದ್ದಾರೆ ಎಂದರೆ ನಾನು ಕೊಂಡು ಕೊಳ್ಳುವ ಕಾಲಕ್ಕೆ ಅಲ್ಲಿ ಬೋರ್ ವೆಲ್ ಇತ್ತು ಯಾರು ತೆಗೆಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿ ದಿ ಃ 07.09.2009 ರಲ್ಲಿ ದಾವಾ ಸ್ವತ್ತಿನಲ್ಲಿ ಬೋರ್ ವೆಲ್ ತೆಗೆಸಿ ಅದಕ್ಕೆ ವಾದಿಯವರೇ ಹಣ ಪಾವತಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿ ಃ 02.04.2015 ರಲ್ಲಿ ಮದನಿ ರಾಮಯ್ಯ ಚೌದರಿರವರು ಸೋಮದೇವನಹಳ್ಳಿ ಪೊ.ಠಾಣೆಯಲ್ಲಿ ನಿಮಗೆ ಮಾರಾಟ ಮಾಡಿದ ಖರೀದಿ ದಾರರ ಮೇಲೆ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರಕರಣ ದಾಖಲಾಗಿರುವುದು ನನಗೆ ಗೊತ್ತಿಲ್ಲ.

ನೀವು ಹಾಜರುಪಡಿಸಿರುವ ನಿಮ್ಮ ಕ್ರಯಪತ್ರದಲ್ಲಿ ನಿಪಿ 27 ರಲ್ಲಿ ಬೋರ್ ವೆಲ್ ದಾವಾ ಸ್ವತ್ತಿನಲ್ಲಿ ಇರುವ ಬಗ್ಗೆ ನಮೂದಾಗಿದೆಯೇ ಎಂದರೆ ಆ ಬಗ್ಗೆ ನಿಪಿ 27 ರಲ್ಲಿ ನಮೂದಾಗಿಲ್ಲ .

ದಾವಾಸ್ವತ್ತನ್ನು ನಾನು ಖರೀದಿ ಮಾಡಿದ ಕಾಲಕ್ಕೆ ಸ್ವತ್ತಿನಲ್ಲಿ ಕರೆಂಟ್ ಇತ್ತು . ಸದರಿ ಕರೆಂಟ್ ನಾನು ಖರೀದಿ ಮಾಡಿದ ವಿಜಯ್ ಕುಮಾರ್ ರವರ ಹೆಸರಿಗೆ ಮಂಜೂರಾಗಿತ್ತು . ದಿ ಃ 07.07.2009 ರಲ್ಲಿ ದಾವಾ ಸ್ವತ್ತಿಗೆ ವಿದ್ಯುತ್ ಮಂಜೂರಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿದ್ಯುತ್ ಸಂಪರ್ಕಯಾರ ಹೆಸರಿಗೆ ಮಂಜೂರಾಗಿದೆ ಎಂದರೆ ನಿಪಿ 40 ನ್ನು ಸಾಕ್ಷಿ ಪರಿಶೀಲಿಸಿ ವಾದಿ ಹೆಸರಿಗೆ ಎಂದು ಹೇಳುತ್ತಾರೆ . 04.12.2018 ರಲ್ಲಿ ಸದರಿ ಸ್ವತ್ತಿಗೆ ವಾದಿಯ ಹೆಸರಿಗೆ ಪರ್ಮನೆಂಟ್ ಆಗಿ ವಿದ್ಯುತ್ ಸಂಪರ್ಕವನ್ನು ನಿಪಿ 41 ರಂತೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ವಿದ್ಯುತ್ ಸಂಪರ್ಕ ವನ್ನು ಪಡೆದುಕೊಳ್ಳುವ ಪೂರ್ವದಲ್ಲಿ ವಾದಿಯವರು ಮಕ್ರಾಜ್ ದವಾಜ್ ಬರ್ಮ ರವರಿಗೆ ದಾವಾ ಸ್ವತ್ತನ್ನು ದಿ ಃ 05.09.2009 ರಲ್ಲಿ ಬಾಡಿಗೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಿಶಾ ರಾಣಿ ಎ. ಸಿ)
III ನೇ ಎ.ಸಿ.ಸಿ & ಎಸ್.ಜೆ,
ಬೆಂಗಳೂರು.